ಇ) ಕೆ.ಬಿ.ಕ್ರಾಸ್‌ನಲ್ಲಿ ಪೋಲೀಸ್ ಹೊರ ಠಾಣೆ ಇದ್ದು, ಇದು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದುದರಿಂದ ಪೋಲೀಸ್ ಠಾಣೆ ಪ್ರಾರಂಭಿಸುವ ಅಗತ್ಯ ಇಲ್ಲ.

ಈ) ಅಗತ್ಯತೆಗೆ ಅನುಗುಣವಾಗಿ ಕೆ.ಬಿ.ಕ್ರಾಸ್‌ನಲ್ಲಿ ಈಗಾಗಲೇ ಹೊರ ಠಾಣೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಪೋಲೀಸ್ ಠಾಣೆ ಪ್ರಾರಂಭಿಸುವ ಅಗತ್ಯವಿಲ್ಲ.

2325(2813) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ):- ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಬೆಂಕಿ ಆಕಸ್ಮಿಕಗಳು ಹೆಚ್ಚಾಗಿದ್ದು, ಇಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದರಿಂದ ತುಂಬಾ ದೂರದಿಂದ ಅಗ್ನಿಶಾಮಕ ದಳದವರು ಬಂದು ಬೆಂಕಿ ನಿಯಂತ್ರಿಸಲು ಆಗುತ್ತಿಲ್ಲದಿರುವುದು ಸರ್ಕಾರಕ್ಕೆ ಗೊತ್ತಿದೆಯೆ;

ಆ) ಹಾಗಿದ್ದಲ್ಲಿ, ಇಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸದಿರಲು ಕಾರಣವೇನು;

ಇ) ಯಾವಾಗ ನಿರ್ಮಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹಾಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಅದರ ಸುತ್ತ ಮುತ್ತ ಅಗ್ನಿ ಅಪಘಾತ ಸಂಭವಿಸಿದಲ್ಲಿ ಸುಮಾರು 23 ಕಿ.ಮೀ. ಅಂತರದಲ್ಲಿರುವ ತಿಪಟೂರು ಅಗ್ನಿಶಾಮಕ ಠಾಣೆಯಿಂದ ವ್ಯವಸ್ಥಿತವಾಗಿ ನಂದಿಸಲಾಗುತ್ತಿದೆ.

ಆ) ಈಗಾಗಲೇ ಮಂಜೂರಾಗಿರುವ 27 ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಆಧ್ಯತೆ ನೀಡಲಾಗಿದ್ದು ನಂತರ ಹೊಸ ಠಾಣೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮುಂದೆ ಪರಿಗಣಿಸಲಾಗುವುದು.

2326(2815) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಡಾ: ನಂಜುಂಡಪ್ಪ ವರದಿಯನ್ನು ಸರ್ಕಾರ ಒಪ್ಪಿದೆಯೆ ಹಾಗೂ ಇದರ ಅನುಷ್ಠಾನಕ್ಕೆ ಸರ್ಕಾರದ ಅಧಿಸೂಚನೆ ಹೊರಡಿಸಲಾಗಿದೆಯೇ.

ಆ) ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲುಕುಗಳು ಈ ವರದಿಯ ಅನ್ವಯ ಹಿಂದುಳಿದ ತಾಲ್ಲೂಕುಗಳಾಗಿವೆ;

ಇ) ತುಮಕೂರು ಜಿಲ್ಲೆಯಲ್ಲಿನ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಮಲತಾಯಿ ಧೋರಣೆ ಅನುಸರಿಸಲು ಕಾರಣವೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಸರ್ಕಾರವು ಡಾ: ನಂಜುಂಡಪ್ಪನವರ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತಾತ್ವಿಕವಾಗಿ ಒಪ್ಪಿದೆ.